ಶ್ರೀ ಹೆಚ್. ಬಿ. ಜ್ವಾಲನಯ್ಯ.—ಇವರ ಮೇಲೆ ಅಪಾದನೆಗಳು ಬಂದಿದ್ದರೆ ಮತ್ತು, ಅವು ಸರಕಾರಕ್ಕೆ ಮನವರಿಕೆಯಾಗಿದ್ದರೆ ಇವರನ್ನು ಟ್ರಾನ್ಸ್‌ಫರು ಮಾಡಿದರೆ ಇದೇ ಒಂದು ತರಹದ ಪನಿಷ್‌ಮೆಂಟು ಎಂದು ಸರಕಾರ ಭಾವಿಸಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅಪಾದನೆಗಳೇ ಸಾಬೀತಾಗಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇವರ ಮೇಲೆ ಬಂದಿರುವ ಅಪಾದನೆಗಳ ಜೊತೆಗೆ ಲಂಚದ ಅಪಾದನೆಯೂ ಬಂದಿದೆ ಎನ್ನುವುದು ಸರಕಾರಕ್ಕೆ ಗೊತ್ತಿದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಅಪಾದನೆಯೇ ಇಲ್ಲ ಮತ್ತು ಯಾವ ಅಪಾದನೆಗಳೂ ರುಜು ವಾತು ಆಗಲಲ್ಲ.

ಶ್ರೀ ಎಸ್. ಬಂಗಾರಪ್ಪ.—ಇವರ ಮೇಲೆ ಬಂದಿರುವ ಅಪಾದನೆಗಳು ಯಾವುವು ? ಅದರಲ್ಲಿ ಏನಾದರೂ ಅಕ್ರಮಗಳು ನಡೆದಿವೆ ಎಂದು ಕಂಡು ಬಂದರೆ ಅವರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

Sri K. V. SHANKARA GOWDA.—He is repeating the question. It has already been answered.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿರುವ ಇನ್ಸ್‌ಪೆಕ್ಟರು ಸಿಂಡಿಕೇಟು ಸರಕಾರದ ಪರವಾಗಿದ್ದಾರೆ ಎಂದು ಇವರ ಮೇಲೆ ಬಂದ ದೂರನ್ನು ತಳ್ಳಿಹಾಕಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ ಎಂದು ಕೇಳಿಬರುತ್ತದೆ. ಇದನ್ನು ಸರಕಾರ ಒಪ್ಪುತ್ತದೆಯೇ ?

ಶ್ರೀ ಕೆ. ವಿ. ಶಂಕರಗೌಡ.—ಇಂತಹ ಯಾವ ಪ್ರಯತ್ನವೂ ಸರಕಾರ ಮಾಡಿಲ್ಲ. ಇದರಲ್ಲಿ ಇಂಡಿಕೇಟು ಹಾಗೂ ಸಿಂಡಿಕೇಟು ಪ್ರಶ್ನೆಯೇ ಬರುವುದಿಲ್ಲ. ಸರಕಾರದಲ್ಲಿ ಸರ್ವಿಸ್ ಕಾಂಡಕ್ಟ್ ರೂಲ್ಸ್ ಎಂದು ಇದೆ. ಇದಕ್ಕೆ ವಿರೋಧವಾಗಿ ನಡೆಯುವವರ ಮೇಲೆ ಸರಕಾರ ನೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ. ಆದರೆ ಇಲ್ಲಿ ವಿಚಾರಣೆಯಾದಾಗ ಇದರಲ್ಲಿ ಯಾವ ದೂರುಗಳೂ ಇಲ್ಲ ಎನ್ನುವುದು ಕಂಡುಬಂದಿದೆ.

Starting of a Dairy at Hassan

633. Sri H. B. JWALANAIAH (Hassan).—

Will the Minister of State for Veterinary Services, Animal Husbandry and Dairy Development be pleased to state :—

(*a*) whether there is any proposal before the Government to start a dairy during the fourth five year plan at Hassan ;

(*b*) if so, the capital outlay of the project ?

Sri G. B. SHANKAR RAO (Minister of State for Veterinary Services, Animal Husbandry and Dairy Development).—

(*a*) Hassan has been included in the list of places where Rural Dairy Centres have been proposed to be established in the IV Plan and the proposals are under examination of the Government.

(*b*) Rs. 15.04 lakhs.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ನಾಲ್ಕನೇ ಯೋಜನೆಯಲ್ಲಿ ಹಾಸನದಲ್ಲಿ ಒಂದು ಡೈರಿ ಪ್ರಾರಂಭ ಮಾಡುವ ಯೋಜನೆ ಪರಿಶೀಲನೆಯಲ್ಲಿದೆ ಎಂದು ಇಲ್ಲಿ ಪಟ್ಟಿಯಲ್ಲಿ ಸೂಚಿಸಿದ್ದೀರಿ. ಇದನ್ನು ಯಾವಾಗ ಕಾರ್ಯಗತಮಾಡುತ್ತೀರಿ ?

ಶ್ರೀ ಜಿ. ಬಿ. ಶಂಕರರಾವ್.—ನಾಲ್ಕು ಕಡೆಗಳಲ್ಲಿ ಡೈರಿ ಯೋಜನೆಯನ್ನು ನಾಲ್ಕನೆ ಯೋಜನೆಯಲ್ಲಿ ಮಾಡಬೇಕೆಂದು ಇದೆ. ಇದರಲ್ಲಿ ಯಾವುದನ್ನು ಮುಂಚೆ ಆರಂಭ ಮಾಡಬೇಕು ಎನ್ನುವುದು ಪರಿಶೀಲನೆಯಲ್ಲಿದೆ.

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಮಾನ್ಯ ಪಿ. ಡಬ್ಲ್ಯು. ಡಿ. ಮಂತ್ರಿಗಳು ಹಾಸನಕ್ಕೆ ಬನ್ನು ಪ್ರದರ್ಶನದ ಸಮಾರಂಭದಲ್ಲಿ ಮುಕ್ತಾಯ ಭಾಷಣ ಮಾಡುವಾಗ ಹಾಸನದಲ್ಲಿ ಒಂದು ಡೈರಿ ಯೋಜನೆಯನ್ನು ಮಾಡಬೇಕೆಂದು ಇದೆ ಮತ್ತು ಇದನ್ನು ಹಾಸನದಲ್ಲಿರುವ ರೋಟರಿ ಕ್ಲಬ್‌ನವರ ಮುಖೇನ ವ್ಯವಸ್ಥೆ ಮಾಡುತ್ತೇವೆ ಮತ್ತು ಇದಕ್ಕೆ ಸರಕಾರದ ಒಪ್ಪಿಗೆಯೂ ಇದೆ ಎಂದೂ ಹೇಳಿದ್ದರು. ಇದು ಸರಕಾರದ ಗಮನಕ್ಕೆ ಬಂದಿಲ್ಲವೇ?

ಶ್ರೀ ಜಿ. ಬಿ. ಶಂಕರರಾವ್.—ಹಾಸನದಲ್ಲಿರುವ ರೋಟರಿ ಕ್ಲಬ್‌ನವರು ಸುಮಾರು 10-15 ಲಕ್ಷ ರೂಪಾಯಿಗಳ ಖರ್ಚು ಬರುವ ಈ ಡೈರಿ ಯೋಜನೆ ಮಾಡುವುದು ಕಷ್ಟ ನಾವೇ ಮಾಡ ಬೇಕೆಂದಿದ್ದೇವೆ. ಒಂದು ವೇಳೆ ರೋಟರಿ ಕ್ಲಬ್‌ನವರೇ ಮುಂದೆ ಬಂದು ಮಾಡುವದಾದರೆ ಇವರಿಗೆ ಎಲ್ಲ ವಿಧವಾದ ಸಹಾಯಗಳನ್ನು ಮಾಡುತ್ತೇವೆಂದು ಅವರಿಗೆ ಹೇಳಿದ್ದೇವೆ.

ಶ್ರೀ ಶರಣಗೌಡ ಇನಾಂದಾರ್.—ಹಾಸನದಲ್ಲಿ ಡೈರಿ ಯೋಜನೆ ಮಾಡುವಂತೆ ಬೇರೆ ಯಾವ ಯಾವ ಕಡೆಗಳಲ್ಲಿ ಡೈರಿ ಸ್ಥಾಪನೆ ಮಾಡಬೇಕೆಂದು ಸರಕಾರದ ಮುಂದೆ ಪ್ರಪೋಸರ್‌ಗಳು ಬಂದಿವೆ?

ಶ್ರೀ ಜಿ. ಬಿ. ಶಂಕರರಾವ್.—ಹಾಸನ ಬಿಟ್ಟು ಇನ್ನು ಮೂರುಕಡೆ ಡೈರಿ ಪ್ರಾರಂಭಿಸುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆ.

Sri SHARAN GOWDA INAMDAR.—I want to know the definite places that have been included. Now Hassan City has been included. What do you do about other places?

ಶ್ರೀ ಜಿ. ಬಿ. ಶಂಕರರಾವ್.—ರಾಯಚೂರು, ಬಳ್ಳಾರಿ, ಬಿಜಾಪುರ, ಬಾಗಲ್‌ಕೋಟೆ ಮತ್ತು ಚಿತ್ರದುರ್ಗ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹಾಸನ ಜಿಲ್ಲೆ ಮಲೆನಾಡು ಪ್ರದೇಶವಾಗಿದೆ. ಅಲ್ಲಿ ಇತ್ತೀಚೆಗೆ ಉತ್ತಮ ಏಶ್ರುತಳಿ ದನಗಳನ್ನು ಬೆಳೆಸುವ ವ್ಯವಸ್ಥೆ ಮಾಡಿರುವುದರಿಂದ ಮತ್ತು ಹೆಚ್ಚಿನ ರೈತರು ಈ ವೃತ್ತಿಯನ್ನು ಕೈಕೊಂಡಿರುವುದರಿಂದ ಅಲ್ಲಿ ಜಾಗ್ರತೆ ಒಂದು ಡೈರಿಯನ್ನು ಪ್ರಾರಂಭ ಮಾಡಿ ಅಲ್ಲಿಯ ಜನರಿಗೆ ಒಳ್ಳೆಯ ಹಾಲನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಅಲ್ಲಿ ಡೈರಿಯನ್ನು ಪ್ರಾರಂಭ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಡೈರಿಯನ್ನು ಪ್ರಾರಂಭ ಮಾಡಬೇಕಾದರೆ ಡೈರಿಗೆ 5 ಸಾವಿರ ಲೀಟರ್ ಹಾಲು ಸರಬರಾಜಾಗಬೇಕಾಗುತ್ತದೆ ನಗರದ ಸುತ್ತಮುತ್ತಲಿರುವ ರೈತರು ಡೈರಿಗೆ ಹಾಲನ್ನು ಒದಗಿಸುವುದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕಾಗುತ್ತದೆ. ನಗರವಾಸಿಗಳಿಗೆ ಒಳ್ಳೆಯ ಹಾಲನ್ನು ಒದಗಿಸುವ ಬಗ್ಗೆ ಮಾನ್ಯ ಸದಸ್ಯರಿಗಿಂತ ಹೆಚ್ಚಿನ ಆತುರ ಸರ್ಕಾರಕ್ಕೆ ಇದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ನಮಗಿಂತ ಹೆಚ್ಚಿನ ಆತುರ ಸರ್ಕಾರಕ್ಕೆ ಇದೆ ಎಂದು ಹೇಳಿದರು. ನಾಲ್ಕನೆಯ ಯೋಜನೆಯಲ್ಲಿ ನಮ್ಮ ಹಾಸನದಲ್ಲಿ ಮೊದಲು ಒಂದು ಡೈರಿಯನ್ನು ಸ್ಥಾಪನೆ ಮಾಡುತ್ತಾರೆಂದು ನಂಬೋಣವೇ?

ಶ್ರೀ ಜಿ. ಬಿ. ಶಂಕರರಾವ್.—ಮೊದಲು ಹಾಸನದಲ್ಲ, ನಂತರ ಬೇರೆ ಕಡೆ ಎಂಬ ಪ್ರಶ್ನೆ ಇಲ್ಲ ಇಲ್ಲ. ನಾಲ್ಕನೇ ಪಂಚವಾರ್ಷಿಕ ಯೋಜನೆಯೊಳಗೆ ಹಾಸನದಲ್ಲಿ ಡೈರಿಯೊಂದನ್ನು ಪ್ರಾರಂಭ ಮಾಡಬೇಕೆಂಬ ಅಭಿಲಾಷೆ ಸರ್ಕಾರಕ್ಕೆ ಇದೆ.

ಶ್ರೀ ಎಂ. ನಾಗಪ್ಪ.—ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ ರಾಯಚೂರಿನಲ್ಲಿ ಒಂದು ಡೈರಿಯನ್ನು ಪ್ರಾರಂಭ ಮಾಡರಾಗುತ್ತದೆಂದು ಹೇಳಿದಿರಿ. 1970ನೇ ಏಪ್ರಿಲ್ ತಿಂಗಳಲ್ಲಿ ಅಲ್ಲಿ ಡೈರಿಯೊಂದನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಜಿ. ಬಿ. ಶಂಕರರಾವ್.—ಆ ರೀತಿ ಆಶ್ವಾಸನೆ ಕೊಟ್ಟರೆ ಹಾಸನದವರು ನಮಗೂ ಆಶ್ವಾಸನೆ ಕೊಡಿ ಎಂದು ಕೇಳುತ್ತಾರೆ. ಹಾಲು ಸಿಗದೆ ಡೈರಿಯನ್ನು ಪ್ರಾರಂಭ ಮಾಡಿ ಏನು ಪ್ರಯೋಜನ ಎಲ್ಲ ಹಾಲು ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತದೋ ಅಲ್ಲಿ ಮೊದಲು ಹಾಲಿನ ಡೈರಿಯನ್ನು ಪ್ರಾರಂಭ ಮಾಡಬೇಕಾಗುತ್ತದೆ.